# ಹೇಮಾವತಿಯ ಪ್ರೇಮ ನಿವೇದನೆ

ಈ ರೀತಿಯ ನನ್ನ ಪಕ್ಕದಲ್ಲಿ ಕುಳಿತವರ ಸ್ಥಾನಪಲ್ಲಟ ಮೂರ್ನಾಲ್ಕು ವಾರಗಳು ಪುನರಾವರ್ತಿತವಾದ ಮೇಲೆ ಒಂದು ದಿನ ಇದು ನನಗೆ ಇಷ್ಟವಿಲ್ಲವೆಂದು ಅವಳಿಗೆ ನೇರವಾಗಿ ತಿಳಿಸಿದೆ. ಅವಳೇನೂ ಬೇಸರ ಮಾಡಿಕೊಳ್ಳಲಿಲ್ಲ. 'ನಿಮ್ಮ ಪಕ್ಕದಲ್ಲಿ ಕುಳಿತರೆ ಬೆಂಗಳೂರು ಬಂದದ್ದು ತಿಳಿಯುವುದೇ ಇಲ್ಲ..' ಎಂದು ಹೇಳಿ ಮುಗುಳ್ನಕ್ಕಿದ್ದಳು. ಇಂತಹ ಅತಿರೇಕಗಳಿಂದ ನಾನು ಸೋಮವಾರ ಬೆಳಗಿನ ಮೈಸೂರು–ತಿರುಪತಿ ಬಸ್ಸನ್ನು ಬದಲಾಯಿಸಿ ಬೇರೆ ಬಸ್ಸಿಗೆ ಹೋಗಬೇಕೆಂದು ಆಲೋಚಿಸಿದೆ. ಆದರೆ ಆ ಬಸ್ಸು ಹೊರಟ ನಂತರದ ಬಸ್ಸುಗಳಿಗೆ ಹತ್ತಿದರೆ ನಾನು ಕಾರ್ಖಾನೆ  ತಲುಪುವುದು ತಡವಾಗುತಿತ್ತು. ಇಷ್ಟು ದಿನ ನನ್ನ ವೃತ್ತಿಜೀವನದಲ್ಲಿ ನಾನು ಬೆಳೆಸಿಕೊಂಡ ಸಮಯಪಾಲನೆಯ ಶಿಸ್ತಿಗೆ ಚ್ಯುತಿ ಬರುತಿತ್ತು. ಹಾಗಾಗಿ ಬಸ್ಸನ್ನು ಬದಲಾಯಿಸುವುದು ಸಾಧ್ಯವಾಗಲಿಲ್ಲ.

ಮತ್ತೆ ಮುಂದಿನ ದಿನಗಳಲ್ಲಿ ಪ್ರತಿದಿನವೂ ಗುಡ್ ಮಾರ್ನಿಂಗ್, ಗುಡ್ ನೈಟುಗಳೂ ಅಲ್ಲದೆ, ಒಂಟಿ ಒಂಟಿಯಾಗಿರುವುದು ಬೋರು ಬೋರು.. ಈ ಸಂಜೆ

